## 47. ಚೀನಾ ಗಡಿಯಲ್ಲಿ ಯುದ್ಧ ಭೀತಿ

ಪೂರ್ವ ಲಡಾಖ್‌ನ ಗಲ್ವಾನ್ ಕಣಿವೆಯಲ್ಲಿ ಸಂಘರ್ಷ ಸಂಭವಿಸಿ 20 ಭಾರತೀಯ ಯೋಧರು ಹುತಾತ್ಮರಾದ ಬೆನ್ನಲ್ಲೇ ಭಾರತ-ಚೀನಾ ಗಡಿಯಲ್ಲಿ ಯುದ್ಧ ರೀತಿಯ ರೋಷಾವೇಶ ಕಂಡುಬರುತ್ತಿದೆ. ಉಭಯ ದೇಶಗಳು ಸಹಸ್ರಾರು ಯೋಧರನ್ನು ಗಡಿಯಲ್ಲಿ ನಿಯೋಜನೆ ಮಾಡಿರುವುದು ಆತಂಕಕ್ಕೆ ಕಾರಣವಾಗಿದೆ. ಘಟನೆ ಹಿನ್ನೆಲೆಯಲ್ಲಿ ಇಡೀ ಲಡಾಖ್ ಕಣಿವೆಯಲ್ಲಿ ಭಾರತೀಯ ಸೇನೆ ಭಾರೀ ಕಟ್ಟೆಚ್ಚರ ವಹಿಸಿದೆ. ಲೇಹ್‌ನ ಕೋರ್‌ಕಮಾಂಡರ್ ಪ್ರತಿ ಗಂಟೆಗೊಮ್ಮೆ ಪರಿಸ್ಥಿತಿಯ ಕುರಿತು ಹಿರಿಯ ಅಧಿಕಾರಿಗಳಿಗೆ ಮಾಹಿತಿ ರವಾನಿಸುತ್ತಿದ್ದಾರೆ. ಲಡಾಖ್‌ನಿಂದ ಅರುಣಾಚಲ ಪ್ರದೇಶದವರೆಗಿನ 3488 ಕಿ.ಮೀ. ಉದ್ದದ ಗಡಿಗುಂಟ ಯುದ್ಧ ಅಲರ್ಟ್ ಅನ್ನು ಭಾರತ ಘೋಷಿಸಿದೆ.

ಗಲ್ವಾನ್ ಕಣಿವೆ, ದೌಲತ್ ಬೇಗ್ ಓಲ್ಡಿ, ದೆಪ್ಸಾಂಗ್, ಚೂಸೂಲ್‌ನಂತಹ ಲಡಾಖ್ ಭೂಭಾಗಗಳು ಸೇರಿದಂತೆ ಗಡಿಯುದ್ದಕ್ಕೂ ಚೀನಾ ಸಹಸ್ರಾರು ಯೋಧರನ್ನು ಹಾಗೂ ದೈತ್ಯ ಯಂತ್ರೋಪಕರಣಗಳನ್ನು ಮರು ನಿಯೋಜನೆ ಮಾಡಿದೆ. ಇದಕ್ಕೆ ತಿರುಗೇಟು ನೀಡಿರುವ ಭಾರತ, ಲಡಾಖ್‌ನ ಗಡಿಯ ಮುಂಚೂಣಿ ಪ್ರದೇಶವೊಂದರಲ್ಲೇ 15 ಸಾವಿರ ಯೋಧರನ್ನು ರವಾನಿಸಿದೆ. ಗಡಿಯಲ್ಲಿ ಪಹರೆ ಕಾಯುವ ಈ ಯೋಧರ ಹಿಂದೆ ಭಾರಿ ಪ್ರಮಾಣದಲ್ಲಿ ಸೇನೆಯನ್ನು ಯುದ್ಧಸನ್ನದ್ಧ ಸ್ಥಿತಿಯಲ್ಲಿ ಇರಿಸಿದೆ. ಏನೇ ಅಹಿತಕರ ಘಟನೆಗಳು ನಡೆದರೂ ಸೇನಾಪಡೆ ತೀಕ್ಷ್ಣ ತಿರುಗೇಟು ನೀಡಲು ಎಲ್ಲಾ ಸಿದ್ಧತೆ ಮಾಡಿಕೊಂಡಿದೆ. ಇದಲ್ಲದೇ ಅರುಣಾಚಲ ಪ್ರದೇಶದವರೆಗೂ ಯೋಧರನ್ನು ಜಮಾವಣೆ ಮಾಡಿದೆ.

ಗಡಿಯಲ್ಲಿ ಶಾಂತಿ ಕಾಪಾಡಲು ಪೂರ್ವ ಲಡಾಖ್‌ನ ನೈಜ ಗಡಿ ನಿಯಂತ್ರಣ ರೇಖೆ (ಎಲ್‌ಎಸಿ)ಯಿಂದ ಎರಡೂ ದೇಶಗಳ ಸೈನಿಕರು ಹಿಂದೆ ಸರಿಯಬೇಕು ಎಂದು ಉಭಯ ದೇಶಗಳ ನಡುವೆ ಮಾತುಕತೆ ನಡೆಯುತ್ತಿತ್ತು. ಈ ವೇಳೆಯಲ್ಲೇ ಚೀನಾ ದಾಳಿ ನಡೆಸಿರುವುದರಿಂದ ಗಡಿಯಿಂದ ಹಿಂದೆ ಸರಿಯದಿರಲೂ ಭಾರತ ನಿರ್ಧರಿಸಿದೆ ಎನ್ನಲಾಗಿದೆ. 3488 ಕಿ.ಮೀ. ಉದ್ದದ ಎಲ್‌ಎಸಿಯಲ್ಲಿ ಸೈನಿಕರು ಶಸ್ತ್ರಾಸ್ತ್ರಗಳನ್ನು ಹಿಡಿದು ಗಡಿ ಕಾಯುವಂತಿಲ್ಲ ಎಂದು ಉಭಯ ದೇಶಗಳ ನಡುವೆ ಹಳೆಯ ಒಪ್ಪಂದವಿದೆ. ಚೀನಾ ಈ ಒಪ್ಪಂದ ಉಲ್ಲಂಘಿಸಿ ಗನ್ ಹಾಗೂ ಚಾಕು ಹಿಡಿದು ಭಾರತೀಯ ಸೈನಿಕರ ಮೇಲೆ ದಾಳಿ ನಡೆಸಿದೆ. ಶಸ್ತ್ರಾಸ್ತ್ರ ಬಳಸುವಂತಿಲ್ಲ ಎಂಬ ನೀತಿಯನ್ನೂ ಮರುಪರಿಶೀಲನೆ ನಡೆಸಲೂ ಭಾರತ ಚಿಂತನೆ ನಡೆಸಿದೆ.

**12 ಸುಖೋಯ್, 21 ಮಿಗ್ ವಿಮಾನ ಖರೀದಿಗೆ ನಿರ್ಧಾರ:** ಚೀನಾ ಗಡಿಯಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣವಾಗಿರುವಾಗಲೇ, 12 ಸುಖೊಯ್ ಹಾಗೂ 21 ಮಿಗ್ 29 ಯುದ್ಧ ವಿಮಾನಗಳನ್ನು ಖರೀದಿಸಲು ಭಾರತೀಯ ವಾಯುಪಡೆ ನಿರ್ಧರಿಸಿದೆ. ಈ ಯುದ್ಧ ವಿಮಾನಗಳನ್ನು ತ್ವರಿತವಾಗಿ ಖರೀದಿಸುವ ಸಂಬಂಧ ವಾಯುಪಡೆಯು ಸರ್ಕಾರಕ್ಕೆ ತನ್ನ ಪ್ರಸ್ತಾಪನೆ ಸಲ್ಲಿಸಿದೆ. 5 ಸಾವಿರ ಕೋಟಿ ರೂ. ವೆಚ್ಚದ ಈ ಖರೀದಿ ಪ್ರಕ್ರಿಯೆ ಕುರಿತು ರಕ್ಷಣಾ ಸಚಿವಾಲಯವು ಮುಂದಿನ ವಾರ ಅಂತಿಮ ನಿರ್ಣಯ ಕೈಗೊಳ್ಳಲಿದೆ. ರಷ್ಯಾದಿಂದ ಮಿಗ್-29 ಯುದ್ಧ ವಿಮಾನಗಳನ್ನು ಖರೀದಿಸಲು ನಿರ್ಧರಿಸಲಾಗಿದ್ದು, ಇವು ಈಗಿರುವ ಮಿಗ್-29 ಯುದ್ಧ ವಿಮಾನಕ್ಕಿಂತ ಸುಧಾರಿತ ದರ್ಜೆಯದ್ದಾಗಿದೆ. ರಫೇಲ್ ಯುದ್ಧ ವಿಮಾನ ಖರೀದಿ ಒಪ್ಪಂದದ ನಂತರ ಅತಿ ದೊಡ್ಡ ಯುದ್ಧವಿಮಾನ ಖರೀದಿ ವ್ಯವಹಾರವಾಗಲಿದೆ ಎಂದು ಮೂಲಗಳು ಹೇಳಿವೆ.

ಆಧಾರ:ಕನ್ನಡಪ್ರಭ, ದಿನಾಂಕ:19.06.2020